ವಾಕಿಂಗ್, ಯೋಗ ಎಲ್ಲ ಮಾಡ್ಬೇಕು ನೀವು. ಫುಡ್ ಕಂಟ್ರೋಲ್‌ನಲ್ಲಿ ಇರ್ಬೇಕು' ಅಂತ ಹೇಳಿದ್ದರು. ಮರುದಿವಸದಿಂದ ಸ್ನೇಹಾ ಬಿಡದೆ ಅವನನ್ನು ವಾಕಿಂಗಿಗೆ ಕಳಿಸ್ತಾ ಇದ್ದಳು. ವಿಷಯವನ್ನು ಶ್ರೀನಿವಾಸ ರಾಯರ ಬಳಿಯೂ ಹೇಳಿದ್ದಳು. ಅದಕ್ಕೆ ಅವರು, 'ಅಯ್ಯೋ ಅದಕ್ಕೆ ಗಾಬರಿ ಬೇಡ. ಡೈಲಿ ನಾನು ವಾಕಿಂಗು, ಜಾಗಿಂಗು ಎಲ್ಲ ಮಾಡ್ತೇನೆ. ದೂರದ ಕೆರೆ ದಂಡೆಯ ತನಕ ಹೋಗಿ ಬರ್ತೇನೆ. ನಂಗೆ ಸಾ ಒಬ್ನೇ ಹೋಗ್ಲಿಕ್ಕೆ ಬೋರಾಗ್ತದೆ. ನಾನು ಕರ್ಕೊಂಡು ಹೋಗ್ತೇನೆ' ಅಂತ ಹೇಳಿದ್ದರು. ಆದರೆ, ಅದು ದಿನೇಶನಿಗೆ ಇಷ್ಟ ಆಗಿರಲಿಲ್ಲ. ಡೈಲಿ ಅವರಿಂದ ತಪ್ಪಿಸಿಕೊಂಡು ವಾಕಿಂಗಿಗೆ ಹೋಗ್ತಾ ಇದ್ದ. ಆದ್ರೂ ಕೆಲವು ದಿವಸ ರಾಯರ ಪಟ್ಟಿನಿಂದ ತಪ್ಪಿಸಿಕೊಳ್ಳಿಕ್ಕೆ ಆಗ್ತಿರಲಿಲ್ಲ. ರಾಯರು, 'ಕಮಾನ್ ಯಂಗ್ ಮ್ಯಾನ್... ರನ್... ರನ್...' ಅಂತ ಹೇಳ್ತಾ ತಾವು ಓಡುದು, ಬೀಸ ಬೀಸ ನಡಿಯುದು ಎಲ್ಲ ಮಾಡ್ತಾ ಇದ್ರು. ಅವನು ಸ್ಪರ್ಧೆ ಮಾಡಲು ಹೋಗಿ ಸೋಲುತ್ತಿದ್ದ. ಬೀಸ ಬೀಸ ನಡಿಯುವಾಗ ಅವನಿಗೆ ಶ್ವಾಸ ಮೇಲೆ ಮೇಲೆ ಬಂದು ಭಾರೀ ಕಷ್ಟ ಆಗ್ತಾ ಇತ್ತು. ಆಗ ರಾಯರು ತಾವು ಇಷ್ಟು ಪ್ರಾಯ ಆದ್ರೆ ಸಾ ನಿನಗಿಂತ ಚುರುಕಾಗಿ ಇದ್ದೇನೆ ಅಂತ ಮಕ್ಕಾರು ಮಾಡುದು, ಸಿಕ್ಕಿದ ತಮ್ಮ ಫ್ರೆಂಡ್ಸ್ ಹತ್ರ ಹೇಳಿ ನೆಗ್ಯಾಡುದು ಎಲ್ಲ ಮಾಡ್ತಿದ್ರು.

ಮತ್ತೂ ಒಂದು ಘಟನೆ ನಡೆದಿತ್ತು. ದಿನೇಶ ಇದ್ದ ಬೀದಿಯಲ್ಲಿ ಕಾಟು ಮಾವಿನ ಮರಗಳು ತುಂಬ ಇದ್ದವು. ಆ ವರ್ಷ ಎಪ್ರಿಲ್ ತಿಂಗಳಲ್ಲಿ ಕಾಟು ಮಾವಿನ ಕಾಯಿಗಳು ಕಂಡಾಬಟ್ಟೆ ಬೀಳ್ತಾ ಇದ್ದವು. ಸ್ನೇಹಾಳಿಗೆ ಮಾವಿನ ಕಾಯಿ ಗೊಜ್ಜು ಅಂದ್ರೆ ತುಂಬಾ ಇಷ್ಟ. 'ಮಾವಿನ ಕಾಯಿ ಕಂಡಾಬಟ್ಟೆ ಬೀಳ್ತಾ ಉಂಟು. ಸ್ವಲ್ಪ ಹೆಕ್ಕಿಕೊಂಡು ಬನ್ನಿ. ಬೆಳಗ್ಗೆ ಬೇಗ ಹೋಗಿ. ಒಂದು ಪ್ಲಾಸ್ಟಿಕ್ ತೊಟ್ಟೆ ಕೊಡ್ತೇನೆ. ಎಷ್ಟು ಸಾಧ್ಯವಾ ಅಷ್ಟು ಹೆಕ್ಕಿಕೊಂಡು ಬನ್ನಿ. ಒಂದೊಂದೇ ಬಗ್ಗಿ ಹೆಕ್ಕಿ ತೆಗೀತಾ ಇದ್ರೆ ನಿಮ್ಮ ಹೊಟ್ಟೆ ಸಾ ಕರಗ್ತದೆ' ಅಂತ ಹೇಳಿದ್ದಳು. ಅವಳ ಮಾತಿನ ಹಾಗೆಯೇ ಅವ ಮರುದಿವಸದಿಂದ ಮಾವಿನ ಕಾಯಿ ಹೆಕ್ಲಿಕ್ಕೆ ಹೋಗಿದ್ದ. ಆದರೆ, ಸರೀ ಬೆಳಕಾಗುವ ಮೊದಲೇ ಅವನಿಗಿಂತ ಮೊದಲೇ ಬಂದು ಸುಮಾರು ಜನ ಬಂದು ಹೆಕ್ಕಿಕೊಂಡು ಹೋಗ್ತಿದ್ರು. ಅದ್ರಲ್ಲೂ ರಾಯರು ಒಂದು ದೊಡ್ಡ ತೊಟ್ಟೆ ಹಿಡ್ಕೊಂಡು ತುಂಬ ಮಾವಿನ ಕಾಯಿ ಹಿಡ್ಕೊಂಡು, 'ಏ ಯಂಗ್ ಮ್ಯಾನ್' ಅಂತ ಅವನಿಗೆ ಮಕ್ಕಾರು ಮಾಡ್ತಿದ್ರು. ಅವನಿಗೆ ಕಂಡಾಬಟ್ಟೆ ಗರ್ವ ಬರ್ತಿತ್ತು. ದರಿದ್ರ ಮುದುಕ ನನಗಿಂತ ಮೊದ್ಲೇ ಎಲ್ಲ ಮಾವಿನಕಾಯಿ ಗೋರಿಕೊಂಡು ಹೋಗ್ತಾನಲ್ಲಾ? ಕಲಿಸ್ತೇನೆ ಅವನಿಗೆ ಬುದ್ಧಿ ಅಂತ ಆ ದಿನ ಬೆಳಗ್ಗೆ ಬೇಗನೇ ರಾಯರು ಬರುವುದಕ್ಕೂ ಮೊದಲೇ ಟಾರ್ಚ್ ಬೆಳಕಿನ ಸಹಾಯದಿಂದ ಬಿದ್ದ ಅಷ್ಟೂ ಮಾವಿನಕಾಯಿಗಳನ್ನು ಹೆಕ್ಕಿದ. ಆವತ್ತು ರಾಯರು ಬರುವಾಗ ಸ್ವಲ್ಪ ಲೇಟ್ ಆಗಿತ್ತು. ಅವರು ಬರೂದು ಅಲ್ಲಿ ಇಲ್ಲಿ ಹೆಕ್ಕುದು ಎಲ್ಲವನ್ನೂ ಓರೆಗಣ್ಣಿನಲ್ಲೇ ನೋಡ್ತಾ ಇದ್ದ. ಅವರಿಗೆ ಏನೂ ಸಿಗದೇ ಇದ್ದದ್ದು ನೋಡಿ ಒಳಗೊಳಗೇ ಖುಷಿ ಪಟ್ಟುಕೊಂಡ. ಹೆಕ್ಕಿಕೊಂಡು ವಾಪಸು ಹೋಗುವಾಗ, 'ಓಯ್ ಇಲ್ಲಿ ನೋಡಿ' ಅಂತ ಹೇಳಿ ತುಂಬಿದ್ದ ತನ್ನ

